**ಸಾಕ್ಷಿಯನ್ನು ದಿಃ 22-06-2024 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಪಾಟೀ ಸವಾಲು ಶ್ರೀ ಸಿ ಐ ಪಿ ವಕೀಲರಿಂದ 1 ಪ್ರತಿವಾದಿಯ ಪರವಾಗಿ**

1) ನಾನು ಪಿಯುಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಈಗ ಪದವಿ ವ್ಯಾಸಾಂಗ ಮಾಡುತ್ತಿದ್ದೇನೆ. ನಾನು ನನ್ನ ಮಾಧ್ಯಮಿಕ ಶಾಲೆಯನ್ನು ಜಿ ಕೆ ಹಿರೇಗೌಡ ಪ್ರಾಥ ಶಾಲೆ, ರೊಟ್ಟಿಗವಾಡ ಇಲ್ಲಿ ಮಾಡಿರುತ್ತೇನೆ. ವಾದಿ ನಂ. 5 ಇವರ ಶಿಕ್ಷಣ ಸಹ ಮೇಲೆ ಹೇಳಿದ ಶಾಲೆಯಲ್ಲಿ ಆಗಿರುತ್ತದೆ ಎಂದರೆ ಸರಿ. 2 ನೇ ವಾದಿ ಕೆ ಎಸ್ ಆರ್ ಟಿ ಸಿ ಯಲ್ಲಿ ನೌಕರಿ ಮಾಡುತ್ತಿದ್ದಾರೆ ಎಂದರೆ ಸರಿ. ಸದರಿ ನೌಕರಿಯು ನಮ್ಮ ತಂದೆಯವರು ತೀರಿಕೊಂಡ ನಂತರ ಪರಿಹಾರ ನಿಮಿತ್ಯ ನೀಡಿದ ನೌಕರಿ ಎಂದರೆ ಸರಿ. 2 ನೇ ವಾದಿಗೆ ಹುಣಸಿಕಟ್ಟಿ ಗ್ರಾಮದ ಹುಡೇದಮನಿ ಮನೆತನದ ಯುವಕನೊಂದಿಗೆ ಮದುವೆ ಮಾಡಿ ಕೊಟ್ಟಿರುತ್ತೇವೆ ಎಂದರೆ ಸರಿ. 3 ನೇ ವಾದಿಗೆ ನೀಲಗುಂದ ಗ್ರಾಮದ ಮರಿಶೆಟ್ಟರ ಮನೆತನದ ಯುವಕನೊಂದಿಗೆ ಮದುವೆ ಮಾಡಿ ಕೊಟ್ಟಿರುತ್ತೇವೆ ಎಂದರೆ ಸರಿ. 4 ನೇ ವಾದಿಗೆ ಕೊಂಕನಕುರಹಟ್ಟಿ ಗ್ರಾಮದ ಸುರಳಿಕಲ್ಲ ಮನೆತನದ ಯುವಕನೊಂದಿಗೆ ಮದುವೆ ಮಾಡಿ ಕೊಟ್ಟಿರುತ್ತೇವೆ ಎಂದರೆ ಸರಿ. 5 ನೇ ವಾದಿಗೆ ನೀಲಗುಂದ ಗ್ರಾಮದ ಮರಿಶೆಟ್ಟರ ಮನೆತನದ ಯುವಕನೊಂದಿಗೆ ಮದುವೆ ಮಾಡಿ ಕೊಟ್ಟಿರುತ್ತೇವೆ ಎಂದರೆ ಸರಿ. ನನ್ನ ತಂದೆ ದಿಃ 05-09-2006 ರಂದು ತೀರಿಕೊಂಡಿರುತ್ತಾರೆ. ನಮ್ಮ ತಂದೆ ತಮ್ಮ ಜೀವಿತ ಅವಧಿಯಲ್ಲಿ ವೆಂಕಟಾಪೂರ ಗ್ರಾಮದಲ್ಲಿ ರಹವಾಸಿ ಇದ್ದರು. ಅವರು ತೀರಿಕೊಂಡ ನಂತರ ನಾವು ಗದಗ ಇಲ್ಲಿ ವಾಸ ಮಾಡಲು ಬಂದಿರುತ್ತೇವೆ ಎಂದರೆ ಸರಿಯಲ್ಲ.

2) ನಮ್ಮ ಮನೆತನದ ಮೂಲ ಪುರುಷ ಬಸಪ್ಪ ನರೆಗಲ್ಲ ಎಂದರೆ ಸರಿ. ಅವರಿಗೆ ಅಂದಾನಪ್ಪ , ದ್ಯಾಮಪ್ಪ ಮತ್ತು ರೇಣವ್ವ ಎಂಬ ಮಕ್ಕಳು ಇರುತ್ತಾರೆ ಎಂದರೆ ಸರಿ. ದ್ಯಾಮಪ್ಪ ಬಸಪ್ಪ ಇವರ ಹಿರಿಯ ಮಗ ಇರುತ್ತಾರೆ. ನನ್ನ ತಂದೆಯ ಹೆಸರು ಅಂದಾನಪ್ಪ ಎಂದರೆ ಸರಿ. ದ್ಯಾಮಪ್ಪನಿಗೆ 6 ಜನ ಮಕ್ಕಳು ಎಂದರೆ ಸರಿಯಲ್ಲ. ನಾನು ದ್ಯಾಮಪ್ಪ ಇವರ ಒಬ್ಬನೇ ಮಗ ಮಲ್ಲಿಕಾರ್ಜುನಗೌಡ ಇವರನ್ನು ಮಾತ್ರ ಪಕ್ಷಗಾರರನ್ನಾಗಿ ಮಾಡಿರುತ್ತೇನೆ ಎಂದರೆ ಸರಿ. ನನ್ನ ತಂದೆ ತೀರಿಕೊಂಡಾಗ ನನಗೆ 6 ವರ್ಷ ವಯಸ್ಸು ಆಗಿತ್ತು. 1 ನೇ

ಪ್ರತಿವಾದಿ ನನ್ನ ತಂದೆ ತೀರಿಕೊಂಡ ನಂತರ ನಮಗೆ ಸಹಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ಸಹೋದರಿಯರ ಶಿಕ್ಷಣದ ಖರ್ಚನ್ನು 1 ನೇ ಪ್ರತಿವಾದಿಯೇ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಪ್ರಾಢ ಶಿಕ್ಷಣದವರೆಗೆ ಮಾತ್ರ ನೋಡಿಕೊಂಡಿರುವುದಾಗಿ ನುಡಿಯುತ್ತಾರೆ. ನನ್ನ ತಂದೆ ತೀರಿಕೊಂಡ ನಂತರ ಪರಿಹಾರದ ನೌಕರಿಯನ್ನು ನನ್ನ ಸಹೋದರಿಗೆ ಕೊಡಿಸಲು 1 ನೇ ಪ್ರತಿವಾದಿ ಓಡಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಹಾಗೆ 1 ನೇ ಪ್ರತಿವಾದಿ ನಮಗೆ ಯಾವತ್ತೂ ಸಹಾಯ ಮಾಡಿದ್ದರೂ ಮಾಡಿಲ್ಲ ಎಂಬುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3) ದಾವಾ ಆಸ್ತಿಗಳು ಮೂಲತಃ ನಮ್ಮ ಮೂಲ ಪುರುಷ ಬಸಪ್ಪ ನರೇಗಲ್ಲ ಇವರ ಆಸ್ತಿಗಳು ಎಂದರೆ ಸರಿ. ಸದರಿ ಆಸ್ತಿಗಳಲ್ಲಿ ಇಲ್ಲಿಯವರೆಗೂ ಪಾಲು ಆಗಿಲ್ಲ ಎಂದರೆ ಸರಿ. ದಾವಾ ಆಸ್ತಿಗಳ ಕ್ಷೇತ್ರ ಹೇಳಲು ಬರುತ್ತದೆ. ಚೆಕ್ಕುಬಂದಿ ಹೇಳಲು ಬರುವುದಿಲ್ಲ. ಗದಗದಿಂದ ವೆಂಕಟಾಪೂರ ನಡುವಿನ ಅಂತರ 22 ಕಿ.ಮೀ ಇರುತ್ತದೆ. ನಾನು ದಾವಾ ಆಸ್ತಿ ಜಮೀನುಗಳ ಸಾಗುವಳಿಯನ್ನು ಎಂದೂ ಯಾವ ಕಾಲಕ್ಕೂ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿ ಜಮೀನುಗಳ ಸ್ವಾಧೀನದಲ್ಲಿ ಇಲ್ಲದೇ ಇದ್ದರೂ ಸಹ ಅವರ ವಿರುದ್ಧ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಅಸ್ತಿಗಳಿಗೆ ಸಂಬಂಧಿಸಿದಂತೆ ಕರ ತುಂಬಿದ ಬಗ್ಗೆ ರಶೀದಿ ಹಾಜರು ಪಡಿಸಿರುತ್ತೇನೆ. ಹಾಗೆ ನಾನು ಯಾವುದೇ ಕಂದಾಯ ತುಂಬಿದ ಬಗ್ಗೆ ರಶೀದಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ನನ್ನ ಶಾಂತ ರೀತಿಯ ಕಬ್ಜಾ ವಹಿವಾಟಕ್ಕೆ ತೊಂದರೆ ನೀಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಬಗ್ಗೆ ತಂಟೆ ಆದಾಗ ಪಂಚಾಯತಿ ಮಾಡಿರುವುದಾಗಿ ನಾನು ಹೇಳಿದ್ದು ಹಾಗೆ ಪಂಚಾಯತಿಯನ್ನು ಊರ ಹಿರಿಯರ ಸಮಕ್ಷಮ ಮಾಡಿರುತ್ತೇನೆ. ಪಂಚಾಯತಿಯನ್ನು ವೆಂಕಟಾಪೂರ ಗ್ರಾಮದಲ್ಲಿ ಪಂಚರಾದ ಕರಬಸಪ್ಪ ಮತ್ತು ಚನ್ನಪ್ಪ ಇವರ ಮುಂದೆ ಮಾಡಿರುತ್ತೇನೆ. ಹಾಗೆ ಯಾವುದೇ ಪಂಚಾಯತಿ ನಡೆದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ನನಗೆ ಯಾವ ದಿನಾಂಕದಂದು ತೊಂದರೆ ನೀಡಿರುತ್ತಾರೆ ಎಂದು ಹೇಳಲು ಬರುವುದಿಲ್ಲ. ಪ್ರತಿವಾದಿಯರು ಹಾಗೆ ನನಗೆ ಯಾವುದೇ ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಆರೋಗ್ಯ ಚೆನ್ನಾಗಿರುತ್ತದೆ ಎಂದರೆ ಸರಿ.

ಅವರಿಗೆ ಸಾಕ್ಷ್ಯ ನುಡಿಯಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ. ಅವರು ಸಾಕ್ಷ್ಯ ನುಡಿದಲ್ಲಿ ನಿಜ ಸಂಗತಿ ಗೊತ್ತಾಗುತ್ತದೆ ಎಂದು ಅವರನ್ನು ಸಾಕ್ಷ್ಯ ಮಾಡಿಸುತ್ತಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಅನಾವಶ್ಯಕವಾಗಿ ತೊಂದರೆ ನೀಡುವ ಉದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಶ್ರೀ ಎಮ್ ಎ ಪಿ ವಕೀಲರಿಂದ ಪ್ರತಿವಾದಿ ನಂ. 2 ಮತ್ತು 3 ಇವರ ಪರವಾಗಿ**

**(ಸಮಯ ಕೋರಿದ್ದು ಕೋರಿಕೆಯ ಮೇರೆಗೆ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೆ ಸರಿ ಇದೆ

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಮ್.ಎಫ್.ಸಿ ಗದಗ